ಹ್ಯಾಂಗಿಂಗ್ಸ್, ನವಿಲುಗರಿಯ ಕ್ಲಿಪ್ಸ್, ನವಿಲುಗರಿಯ ಬಟರ್ ಫ್ಲೈ ನೋಡಿ ದಂಗಾದೆ... ನೀನಾರಿಗಾದೆಯೋ ಹುಲು ಮಾನವಾ... ಅಂತಲೂ ಅನಿಸಿಬಿಟ್ಟಿತು. ಅದೂ ನಿಜವೇ. ಮನುಷ್ಯನನ್ನು ಹೊರತುಪಡಿಸಿ ಮಿಕ್ಕೆಲ್ಲವೂ ಒಂದಿಲ್ಲೊಂದು ಕೆಲಸಕ್ಕೆ ಬಂದೇ ಬರುತ್ತವೆ. ಕೃಷ್ಣ ಜನ್ಮಾಷ್ಟಮಿಯಂದು ತಯಾರಾಗುವ ನಮ್ಮೆಲ್ಲರ ಮನೆಯ ಕೃಷ್ಣಂದಿರ ದಂಡಿಗೆ ನವಿಲುಗರಿ ಪೂರೈಸುವ ಸವಾಲಿಗೂ ನಾವು ಇಲ್ಲಿಯವರೆಗೂ ಹೆದರಿಲ್ಲ.

ಈ ಹಕ್ಕಿಪುಚ್ಛಗಳನ್ನು ಆಭರಣಕ್ಕಾಗಿ ಅಲಂಕಾರಕ್ಕಾಗಿ ಬಳಸುವುದು ಹೊಸ ವಿಚಾರವೇನೂ ಅಲ್ಲ. ಆದಿ ಮಾನವನ ಕಾಲದಲ್ಲಿಯೇ ಹಕ್ಕಿಪುಚ್ಛಗಳನ್ನು ಹಣೆ ಪಟ್ಟಿಗೆ, ಕಿರೀಟಕ್ಕೆ, ಓಲೆ, ಕೊರಳಿನ ಹಾರಕ್ಕೆ, ಉಡುಗೆಗೆ ಎಂದು ಬಳಸಿ ಬಳಸಿ ಬಿಟ್ಟಿರುವುದೇ... ಮತ್ತೆ ನಾವೀಗ ನಾವೀನ್ಯ ಎನ್ನುವ ಹೆಸರಲ್ಲಿ ಮರಳಿ ಹಿಂದಕ್ಕೆ ಓಡುತ್ತಿದ್ದೇವೆ. ಭೂಮಿ ಗುಂಡಗಿರುವಂತೆ ನಮ್ಮ ಆಲೋಚನೆಗಳೂ ವೃತ್ತಾಕಾರದಲ್ಲಿ ಸುತ್ತುತ್ತವೇನೋ. ಈಗಲೂ ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನಾಂಗಗಳಲ್ಲಿ ಹಕ್ಕಿಪುಚ್ಛಗಳು ಮುಖ್ಯ ಆಲಂಕಾರಿಕ ವಸ್ತುಗಳಾಗಿ ಬಳಕೆಯಾಗುವುದನ್ನು ಕಾಣಬಹುದು. ಅದು ಅವರ ಪ್ರಾಣಿ ಪಕ್ಷಿಗಳ ಮೇಲಿನ ಪ್ರೀತಿಯ ಪ್ರತೀಕವೂ ಹೌದು.

ಪುಚ್ಛಗಳು ಯಾವ ಹಕ್ಕಿಯದ್ದಾದರೂ ಸರಿ ಎಲ್ಲವಕ್ಕೂ ನವಿರುತನ ಸಾಮಾನ್ಯವೆಂದೇ ಹೇಳಬೇಕು. ಕಣ್ಮುಚ್ಚಿ ಮುಖದ ಮೇಲೊಮ್ಮೆ ಸವರಿಕೊಳ್ಳುತ್ತಾ ಕೂತುಬಿಟ್ಟರೆ ಅದು ಯಾವ ಹಕ್ಕಿಯದೆಂದು ತಿಳಿಯುವುದಿಲ್ಲ. ತಿಳಿಯಬೇಕೆನ್ನುವ ದರ್ದು ಕಾಡದು. ಅವಕ್ಕೆ ಹಕ್ಕಿಪುಚ್ಛ ಎಂದರಷ್ಟೇ ಸಾಕೇನೋ. ಹೆಸರು, ಹಿನ್ನಲೆ ಎಂತದ್ದೂ ಬೇಕಾಗದು. ಆದರೆ ಕೆಲವೊಮ್ಮೆ ಹಕ್ಕಿಪುಚ್ಛಗಳು ಅವಾಂತರಗಳನ್ನೂ ಸೃಷ್ಟಿಸಿದ್ದಿದೆ.

ಒಮ್ಮೆ ಹೀಗೆ ಆಯಿತು. ನಮ್ಮ ಮನೆಯ ಎದುರು ಬೀದಿಯಲ್ಲಿ ಅಕ್ಕಪಕ್ಕದ ಅವಳಿ ಮನೆಗಳಿದ್ದವು. ಒಂದರಲ್ಲಿ ಬ್ರಾಹ್ಮಣ ಕುಂಟುಂಬ, ಇನ್ನೊಂದರಲ್ಲಿ ಶೂದ್ರರ ಕುಟುಂಬ ವಾಸಕ್ಕಿದ್ದವು. ಯಾವಾಗಲೂ ಈ ಎರಡು ಮನೆಗಳ ನಡುವೆ ಮುಸುಕಿನ ಗುದ್ದಾಟ. ಇವೆರಡು ಕುಟುಂಬಗಳು ಅನ್ಯೋನ್ಯವಾಗಿದ್ದದ್ದನ್ನು ಯಾರೂ ಕಂಡಿರಲಿಲ್ಲ. ಆಗಾಗ ಇವರ ಪಿಟಿಪಿಟಿ ಕೇಳಿ ಅವರೂ, ಅವರ ಮನೆ ಮೊಟ್ಟೆ ಸಿಪ್ಪೆಯೇ ತಮ್ಮ ಕಾಂಪೌಂಡ್‌ನೊಳಗೆ ಬಿದ್ದಿದೆ ಎಂದು ಇವರೂ ದಿನಾಲೂ ಕೋಳಿ ಜಗಳವಾಡುತ್ತಿದ್ದದ್ದು ಸಾಮಾನ್ಯವಾಗಿತ್ತು. ಹೀಗಿರುವಾಗ ಒಂದುದಿನ ಇದ್ದಕ್ಕಿದ್ದಂತೆ ಬೆಳ್ಳಂಬೆಳಗ್ಗೆ ಇಡೀ ಕೇರಿಗೇ ಎಚ್ಚರವಾಗುವಂತೆ ಜೋರು ಗಲಾಟೆ ಶುರುವಾಗಿಬಿಟ್ಟಿತು. ಎಲ್ಲರೂ ತಮ್ಮ ತಮ್ಮ ಕಿಟಕಿಯೊಳಗೆ ಕಣ್ಣಾನಿಸಿ ಏನಾಗುತ್ತಿದೆಯೆಂದು ನೋಡುತ್ತಾ ಕೂತರು. ಎಷ್ಟೆಂದರೂ ನಾವೆಲ್ಲ ಕದನ ಕುತೂಹಲಿಗಳಲ್ಲವೇ... ಅಷ್ಟಕ್ಕೂ ಅಲ್ಲಿ ಆದದ್ದಾದರೂ ಏನು ಎಂದು ನೋಡಲು ಹೋದರೆ ರಾತ್ರಿ ಎಲ್ಲವೂ ಸರಿಯೇ ಇತ್ತು. ಬೆಳಗ್ಗೆ ಎದ್ದು ನೋಡಿದಾಗ ಬ್ರಾಹ್ಮಣರ ಮನೆಯ ಬಾಗಿಲ ಬಳಿ, ಹೊಸಲಿಗೆ ಅಂಟಿಕೊಂಡಂತೆ ಚೂರು ಪಾರು ಕೋಳಿ ರಕ್ತ ಮಾಂಸ, ಮತ್ತೆ ಒಂದು ರಾಶಿ ಕೋಳಿಪುಚ್ಛಗಳು ಬಿದ್ದಿದ್ದವು. ಅವರ ಪಿತ್ತ ನೆತ್ತಿಗೇರಲು ಇಷ್ಟು ಸಾಕಿತ್ತು ಮತ್ತು ಅವರ ಅನುಮಾನವೆಲ್ಲವೂ ಪಕ್ಕದ ಶೂದ್ರರ ಮನೆಯವರ ಮೇಲೆಯೇ ಇದ್ದು, ಕೊನೆಗೆ ಆ ಜಗಳ ಪೊಲೀಸ್ ಸ್ಟೇಶನ್ ಮೆಟ್ಟಿಲೇರಿ ಅವಸಾನ ಹೊಂದಿತು. ಕೊನೆಗೆ ಶೂದ್ರರ ಕುಟುಂಬ ಈ ಬ್ರಾಹ್ಮಣರ ಸಹವಾಸವೇ ಬೇಡ ಎನ್ನುತ್ತಾ ಮನೆ ಖಾಲಿ ಮಾಡಿ ಬೇರೆಡೆಗೆ ಸ್ಥಳಾಂತರಗೊಂಡಿತು. ಈ ಮಾಂಸಾಹಾರಿಗಳ ಕಾಟ ತಪ್ಪಿತೆಂದು ಈ ಕುಟುಂಬವೂ ನೆಮ್ಮದಿಯ ಉಸಿರುಬಿಟ್ಟಿತು. ಈ ಜಗಳದಿಂದ ಯಾರಿಗೆಷ್ಟು ಲಾಭವಾಯಿತೋ